# ಶ್ರೀರಾಮಕೃಷ್ಣ ಕೃಪಾಪೋಷಿತ ರಸಿಕ

ಸ್ವಾಮಿ ಚೇತನಾನಂದ

**ರಸಿಕನೆಂಬ ಅಸ್ಪೃಶ್ಯನನ್ನು ತಮ್ಮ ದಿವ್ಯಸ್ಪರ್ಶದಿಂದ ಶ್ರೀರಾಮಕೃಷ್ಣರು ಉದ್ಧಾರ ಮಾಡಿದರು. ಅವನ ಕಥೆಯನ್ನೊಳಗೊಂಡ ಈ ಲೇಖನವು ''ಕೃಪಾಪ್ರಾಪ್ತ ರಸಿಕ'' ಎಂಬ ಬಂಗಾಳಿ ಲೇಖನದ ಅನುವಾದ. ಅನುವಾದಕರು ಕಾಶಿಯಲ್ಲಿರುವ ಶ್ರೀರಾಮಕೃಷ್ಣ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವ ಪಿ. ಉಷಾ ಅವರು.**

ಶ್ರೀರಾಮಕೃಷ್ಣ ಸಂಘದ ನಿಕಟಭಕ್ತರ ಹೊರತು ಉಳಿದವರೆಲ್ಲರೂ ರಸಿಕನನ್ನು ಮರೆತುಬಿಟ್ಟಂತಿದೆ. ಹೀಗೆ ಮರೆಯುವುದೂ ಸಹಜವೇ. ಕಾರಣ, ಜನರ ಅಭಿಪ್ರಾಯದಲ್ಲಿ ಅವನೊಬ್ಬ ನಿಕೃಷ್ಟ; ಸಮಾಜದಲ್ಲಿ ದರಿದ್ರನೂ ಅಸ್ಪೃಶ್ಯನೂ ಅವಹೇಳಿತನೂ ಹೌದು. ಶ್ರೀರಾಮಕೃಷ್ಣರ ಲೀಲಾನಾಟಕದಲ್ಲಿ ಅವನ ಪಾತ್ರ ಏನಿದ್ದರೂ ರಂಗಮಂಟಪದ ಹೊರಗೆ. ರಂಗಮಂಟಪವನ್ನು ಪ್ರವೇಶಿಸುವ ಅಧಿಕಾರ ಅವನಿಗಿರಲಿಲ್ಲ. ರಸಿಕನು ದಕ್ಷಿಣೇಶ್ವರದ ದೇವಾಲಯದ ರಸ್ತೆಯನ್ನು ಸ್ವಚ್ಛಗೊಳಿಸುತ್ತಿದ್ದನು, ಅವನು ಅಲ್ಲಿನ ಕಾಳೀ ಮಂದಿರದ ಸುತ್ತಲೂ ಗುಡಿಸಿ ಸ್ವಚ್ಛಗೊಳಿಸುತ್ತಿದ್ದನು. ಜನರಿಗೆ ಅಗೋಚರವಾಗಿಯೇ ತನ್ನ ಜೀವನವನ್ನು ಕಳೆದನು ರಸಿಕ. ಆದ್ದರಿಂದಲೇ ಅವನನ್ನು ಯಾರೂ ಗುರುತಿಸರು. ಅವನಿಗೂ ಯಾರ ಪರಿಚಯವೂ ಅಷ್ಟಾಗಿ ಇರಲಿಲ್ಲ. ಅವನ ವೃತ್ತಿಯೇ ಅಂತಹದು. ಅವನು ದಕ್ಷಿಣೇಶ್ವರ ಮಂದಿರದ ಜಾಡಮಾಲಿ. ದೇವಸ್ಥಾನದ ಪೂಜಾರಿಯಾಗಿದ್ದ ಶ್ರೀರಾಮಕೃಷ್ಣರ ಮಾಸಿಕ ವೇತನವೇ ಐದು ರೂಪಾಯಿಗಳಾಗಿದ್ದಾಗ, ಅವನ ವೇತನವು ಒಂದು ರೂಪಾಯಿಗಿಂತ ಖಂಡಿತವಾಗಿಯೂ ಹೆಚ್ಚಾಗಿರಲಾರದು.

ಅರಿಯುವುದು—ತಪ್ಪಾಗಿ ಅರಿಯುವುದು, ಅರಿಯದಿರುವುದು, —ಇವುಗಳ ಬಗ್ಗೆ, ರಾಮಕೃಷ್ಣರ ಕೃಪೆಯಿಂದ, ರಸಿಕನು ಚಿಂತಿಸಬೇಕಾಗಲಿಲ್ಲ. "ನಾನಾಗಿಯೇ ನಿನಗೆ ಸಿಗದಿದ್ದರೆ ನೀನು ಹೇಗೆ ತಾನೆ ನನ್ನ ಹಿಡಿಯುವೆ?" ಎಂಬ ಮಾತು ಸತ್ಯ. ಶಾಸ್ತ್ರ, ಜಪ-ತಪ, ಧ್ಯಾನ-ಧಾರಣೆಗಳ ಮೂಲಕ ಭಗವಂತನನ್ನು ಅರಿಯುವುದು ಮೂರ್ಖತನ. ಯಮೇವೈಷ ವೃಣುತೇ ತೇನ ಲಭ್ಯಃ—"ಅವನು ಯಾರನ್ನು ಅರಸುತ್ತಾನೆಯೋ ಅವರಿಗೆ ಮಾತ್ರ ಅವನು ಲಭ್ಯ."

ಗುರುತಿಸಲಾರದ ವೃಕ್ಷವನ್ನು ತಿಳಿಯುವುದು ಕಷ್ಟ. ಆದರೆ ರಸಿಕನು ಅದನ್ನರಿತದ್ದು ವಿದ್ಯೆ-ಬುದ್ಧಿಗಳಿಂದಲ್ಲ, ಸರಳತೆಯಿಂದ. ಯಾರು ಧಾರ್ಮಿಕರಾಗಿರುತ್ತಾರೋ ಅವರು ಸರಳರಾಗಿರುತ್ತಾರೆ. ಶ್ರೀರಾಮಕೃಷ್ಣರು ಸರಳತೆಯ ಪ್ರತಿಮೂರ್ತಿ. ಅವರ ಮುಖದೆಡೆಗೆ ಕಣ್ಣು ಹಾಯಿಸಿದರೆ, ಅಥವಾ ವಚನಾಮೃತವನ್ನೋದಿದರೆ ಅವರೆಷ್ಟು ಸರಳರಾಗಿದ್ದರೆಂಬುದು ತಿಳಿಯುತ್ತದೆ; ಎಲ್ಲಿಯೂ ತೋರಿಕೆ, ಆಡಂಬರಗಳಿಲ್ಲದ ವ್ಯಕ್ತಿತ್ವ ಅವರದು. ಪಂಡಿತರು ತಮ್ಮ ದ್ವಂದ್ವಾರ್ಥ ನುಡಿಗಳಿಂದ ಧರ್ಮವನ್ನು ಜಟಿಲವಾಗಿಸಿದ್ದಾರೆ. ಸುಳ್ಳು, ವಂಚನೆ, ಕ್ರೂರತನ, ರಾಜಕೀಯಗಳ ಹಗ್ಗದಿಂದ ನಮ್ಮ ಕಂಠಕ್ಕೆ ನಾವೇ ನೊಸಲನ್ನು ಬಿಗಿದುಕೊಂಡು "ತ್ರಾಹೀ, ತ್ರಾಹೀ" ಎನ್ನುತ್ತಿದ್ದೇವೆ. ನಮ್ಮ ಬುದ್ಧಿವಂತಿಕೆಗೆ ಧಿಕ್ಕಾರ! ಯಾವ ಬುದ್ಧಿವಂತಿಕೆಯಿಂದ ಭಗವಂತನನ್ನು ಪಡೆಯಲು ನಮಗೆ ಸಾಧ್ಯವೊ, ಅದೇ ನಿಜವಾದ ಬುದ್ಧಿವಂತಿಕೆ. ಅಂತಹ ಬುದ್ಧಿವಂತಿಕೆಯೇ ಶ್ರೇಷ್ಠ.

"ಮನಸ್ಸು ಸರಳವಾಗಿರದಿದ್ದರೆ ಈಶ್ವರನ ಕೃಪೆಯಾಗದು." ಇಂತಹ ಕೃಪೆಯ ಕತೆಯನ್ನು ತಮ್ಮ "ಸತ್ಪಸಂಗ" ಎಂಬ ಗ್ರಂಥದಲ್ಲಿ ಸ್ವಾಮಿ ತ್ರಿಗುಣಾತೀತಾನಂದರು ಹೀಗೆ ಬರೆದಿರುವರು : "ರಸಿಕನ ಮೇಲೆ ಠಾಕೂರರು ತೋರಿದ ಅಹೈತುಕೀ ಕೃಪೆಯ ಬಗ್ಗೆ ರಾಮಲಾಲ ದಾದಾರಿಂದ ಕೇಳಿರುವೆ. ದಕ್ಷಿಣೇಶ್ವರ ತೋಟದಲ್ಲಿ ರಸಿಕ ಎಂಬ ತೋಟಿಯಿದ್ದನು. ಪ್ರತಿದಿನವೂ ಅವನು ಠಾಕೂರರನ್ನು ದೂರದಿಂದ ನೋಡುತ್ತಿದ್ದನು. ಅಷ್ಟೊಂದು ಜನರು ಅವರ ಹತ್ತಿರ ಬಂದು ಹೋಗುವುದನ್ನು ಗಮನಿಸುತ್ತಿದ್ದ ಅವನು, 'ನಾನು ಇವರ ಇಷ್ಟು ಸಮೀಪದಲ್ಲಿದ್ದರೂ ಇವರನ್ನು ಬಳಿಸಾರದಂತಹ ಯಾವ ಪಾಪ ವನ್ನು ಮಾಡಿದ್ದೇನೆ? ಇವರ ಸಮೀಪ ಅದೆಷ್ಟು ಪಾಪಿ ತಾಪಿಗಳು ಬರುತ್ತಾರೆ. ಇವರು ಅವರನ್ನೆಲ್ಲ ಉದ್ಧರಿಸುತ್ತಾರೆ. ನನ್ನದೆಂತಹ ದುರದೃಷ್ಟ! ದಕ್ಷಿಣೇಶ್ವರದಲ್ಲಿದ್ದುಕೊಂಡು ನನಗೆ ಅವರ ಚರಣ ಧೂಳಿಯನ್ನು ತೆಗೆದುಕೊಳ್ಳಲಾಗದಲ್ಲ,' ಎಂದು ವ್ಯಥೆ ಪಡುತ್ತಿದ್ದನು. ಮನದಲ್ಲಿ ಬಿರುಗಾಳಿ ಎದ್ದಿತ್ತು, ಹೃದಯದಲ್ಲಿ ಅಶಾಂತಿ ತುಂಬಿತ್ತು.

ಹೀಗೆಯೇ ಮೂರು-ನಾಲ್ಕು ವರ್ಷಗಳು ಸಂದುವು. ಕೊನೆಗೊಂದು ದಿನ ಶುಭಮುಹೂರ್ತ ಉದಯಿಸಿತು. ರಾಮಲಾಲ ದಾದಾ ನಿಂತಿದ್ದಾರೆ. ಶೌಚಕ್ಕೆಂದು ಹೋಗಿದ್ದ ಠಾಕೂರರು ಇಷ್ಟರಲ್ಲೇ ಹಿಂದಿರುಗುವರು. ಮರದ ಹಿಂದೆ ನಿಂತಿದ್ದ ರಸಿಕನಿಗೆ ಅನ್ನಿಸಿತು: 'ಇವತ್ತು ಏನು ಬೇಕಾದರೂ ಆಗಲಿ, ಇನ್ನು ಈ ನನ್ನ ಪಾಡನ್ನು ಸಹಿಸಲಾರೆ.' ಠಾಕೂರರು ನಹಬತ್‌ಖಾನೆಯ ಈ ಕಡೆ ಬರುತ್ತಲೇ ರಸಿಕನು ಅವರ ಎರಡು ಪಾದಗಳನ್ನೂ ಹಿಡಿದು 'ನನ್ನ ಗತಿ ಏನು?' ಎಂದು ಕೇಳಿದನು. ಅವನ ಬಾಯಿಂದ ಈ ಮಾತುಗಳು ಹೊರ ಬರುತ್ತಿದ್ದಂತೆಯೇ ಠಾಕೂರರಿಗೆ ರೋಮಾಂಚನವಾಯಿತು. ನಂತರ ಸಮಾಧಿಸ್ಥರಾದರು. ಹೀಗೆ ಬಹಳ ಹೊತ್ತು ಕಳೆಯಿತು. ರಸಿಕನು ತನ್ನ ಕಣ್ಣೀರಿನಿಂದ ಠಾಕೂರರ ಪಾದಗಳನ್ನು ತೊಳೆಯುತ್ತಿದ್ದಂತೆ ಅವನ ಹೃದಯದಲ್ಲಿನ ಸಕಲ ಕಶ್ಮಲಗಳೂ, ಸಮಸ್ತ ಧಗೆಯೂ ತೊಳೆದು ಹೋಯಿತು. ಸಮಾಧಿಯಿಂದ ಕೆಳಗಿಳಿದ

ಠಾಕೂರರು ಅವನ ತಲೆಯಮೇಲೆ ಕೈಯಿಟ್ಟು, 'ನಿನಗೆ ಎಲ್ಲವೂ ಲಭಿಸುವುದು' ಎಂದು ಭರವಸೆ ನೀಡಿದರು."

ಪ್ರತ್ಯಕ್ಷದರ್ಶಿ ಕೇದಾರನಾಥ ಬಂದೋಪಾಧ್ಯಾಯರು ಈ ರೀತಿ ವರ್ಣಿಸಿದ್ದಾರೆ : "ರಸಿಕನು ದಕ್ಷಿಣೇಶ್ವರ ಗ್ರಾಮದ ಜಲಗಾರ. ಠಾಕೂರರು ಅವನ ಮನೆಯ ಅಂಗಳದಲ್ಲೇ ನಿಂತು ಅವನೊಂದಿಗೆ ನಗುತ್ತ ಮಾತನಾಡುವುದನ್ನು ನಾನು ನೋಡಿರುವೆ. ಸ್ನೇಹಿತನೊಂದಿಗೆ ಮಾತನಾಡುವಂತಿತ್ತು. ನಗುತ್ತ ನಗುತ್ತ ಠಾಕೂರರು ರಸಿಕನಿಗೆ ಹೇಳುತ್ತಿದ್ದರು: 'ಗೊತ್ತಾಯಿತು ಬಿಡು. ಕುಡಿಯುವುದನ್ನು ಸ್ವಲ್ಪ ಕಡಿಮೆ ಮಾಡು' ಎಂದು. ಆಗವನು. 'ಠಾಕೂರ್, ದಿನಾಲು ಯಾರು ಕೊಡುತ್ತಾರೆ? ಅದೃಷ್ಟವಶಾತ್ ನಟವರ ಪಾಂಜಾನ ತಾಯಿ ಸತ್ತುಹೋದಳು! ಯಾರ ತಾಯಿಯಾದರೂ ದಿನಾ ಸಾಯುವರೇ? ನಾನು ಸತ್ತಾಗ ನನ್ನ ಕುಡಿತವೂ ನಿಲ್ಲುವುದು' ಎಂದನು."



ರಸಿಕನ ಮೇಲೆ ಕೃಪಾವರ್ಷಗೈಯುತ್ತಿರುವ ಶ್ರೀರಾಮಕೃಷ್ಣರು

ಧ್ಯಾನ ಮಾಡುವಾಗ ಒಮ್ಮೆ ಶ್ರೀರಾಮಕೃಷ್ಣರ ಮನಸ್ಸು ರಸಿಕನ ಮನೆಗೆ ಓಡಿತು, ಎಂಬ ವಿಚಾರ ಕೇಳಿದಾಗ ಓದುಗರಿಗೆ ಗಾಬರಿ ಯಾಗಬಹುದು. ಆದರೆ ಶ್ರೀರಾಮಕೃಷ್ಣರೇ ಹೇಳಿದರು : "ಅದೇ ಚಿತ್ ಶಕ್ತಿ, ಅದೇ ಮಹಾಮಾಯೆ, ೨೪ ತತ್ತ್ವಗಳಾಗಿರುವುದು. ನಾನು ಧ್ಯಾನಕ್ಕೆ ಕುಳಿತಿದ್ದೆ. ಧ್ಯಾನಿಸುತ್ತಿದ್ದಂತೆ ಮನಸ್ಸು ಜಾಡಮಾಲಿ ರಸಿಕನ ಮನೆಗೆ ಹೋಯಿತು. ಎಲೈ ಮನವೇ, ಇಲ್ಲಿಯೇ ಇರು ಎಂದು ಮನಸ್ಸಿಗೆ ಜೋರು ಮಾಡಿದೆ. ಆಗ, ರಸಿಕನ ಮನೆಯವರೆಲ್ಲ ಓಡಾಡುತ್ತಿದ್ದರೂ, ದೇಹದ ಹೊದಿಕೆ ಮಾತ್ರವೇ ಇದ್ದು ಒಳಗಡೆ ತಾನು (ಮಹಾಮಾತೆಯು) ಒಂದೇ ಕುಲಕುಂಡಲಿನಿ, ಒಂದೇ ಷಟ್ಚಕ್ರರೂಪಳಾಗಿ ನೆಲೆಸಿರುವಳೆಂದು ಮಹಾಮಾತೆಯು ತೋರಿಸಿಕೊಟ್ಟಳು." ಧ್ಯಾನಯೋಗದಲ್ಲಿ ಮನಸ್ಸನ್ನು ರಸಿಕನ ಮನೆಗೆ ಕಳುಹಿಸಿ ಶ್ರೀರಾಮಕೃಷ್ಣರು ಸುಮ್ಮನಾಗಲಿಲ್ಲ. ದಟ್ಟ ರಾತ್ರಿಯ ವೇಳೆ ಸಶರೀರಿಯಾಗಿ ರಸಿಕನ ಮನೆಯ ಪಾಯಖಾನೆಯಲ್ಲಿ ಒಂದು ಉಗ್ರ ತಪಸ್ಸನ್ನೇ ಪ್ರಾರಂಭಿಸಿದರು. ಈ ತಪಸ್ಸಿನ ಬಗ್ಗೆ ದೇವಸ್ಥಾನದ ಜನರು ತಿಳಿದಿರಲಿಲ್ಲ; ತಿಳಿದಿದ್ದರೆ, ಘೋರ ಗಲಭೆಯೇ ಶುರುವಾಗುತ್ತಿತ್ತು. ಅವಶ್ಯವಾಗಿಯೂ ಅಷ್ಟಪಾಶಗಳನ್ನು (ಲಜ್ಜೆ, ತಿರಸ್ಕಾರ, ಭಯ, ಜಾತಿ, ಕುಲ, ಶೀಲ, ಶೋಕ, ನಿಂದೆ) ತಮ್ಮೊಳಗಿಂದ ಕಿತ್ತೆಸೆಯಲು ಪಣತೊಟ್ಟಿದ್ದ ಅವರು ಜನರ ಕಟ್ಟುಪಾಡುಗಳನ್ನು ಹೇಗೆ ತಾನೆ ಮನ್ನಿಸಿಯಾರು? ಶ್ರೀರಾಮಕೃಷ್ಣರು ಬ್ರಾಹ್ಮಣರು, ಮಾತ್ರವಲ್ಲ, ಅವರು ಕಾಳೀ ದೇವಸ್ಥಾನದ ಪೂಜಾರಿಗಳೂ ಕೂಡ. "ಬ್ರಾಹ್ಮಣನೇನಾದರೂ ಅಕಸ್ಮಾತ್ತಾಗಿ ನೀಚ ಜಾತಿಯವನ ಮುಖವನ್ನು ನೋಡಿಬಿಟ್ಟರೆ, ಅವನು ದಿನ ವಿಡೀ ಉಪವಾಸವಿದ್ದು ಒಂದು ಸಾವಿರ ಗಾಯತ್ರೀ ಜಪವನ್ನು ಮಾಡತಕ್ಕದ್ದು" ಎಂದು ಪ್ರಾಚೀನ ಸ್ಮೃತಿಗ್ರಂಥಗಳು ಹೇಳುತ್ತವೆ. ಇಂತಹ ಶಾಸ್ತ್ರೀಯ ನಿಷೇಧಗಳನ್ನೆಲ್ಲ ಉಲ್ಲಂಘಿಸಿ ಈ ಬ್ರಾಹ್ಮಣೋತ್ತಮರು ನೀಚ ಜಾತಿಯವರು ಊಟಮಾಡಿದ ಜಾಗವನ್ನು ಸ್ವಚ್ಛಗೊಳಿಸಿ ಅವರು ಬಿಟ್ಟ ಎಂಜಲನ್ನು ಭಗವತ್ಪ್ರಸಾದವೆಂದು ಗ್ರಹಣ ಮಾಡುತ್ತಿದ್ದರು. ಅಷ್ಟೇ ಏಕೆ, ರಾತ್ರಿ ಗೋಪನದಲ್ಲಿ ಎದ್ದು ಪಾಯಖಾನೆಯನ್ನು ಶುಚಿಗೊಳಿಸಿ ಅಸ್ಪೃಶ್ಯರೊಂದಿಗೆ ತಮ್ಮ ಸಮತ್ವವನ್ನು ಅನುಭವಿಸಲು ಪ್ರಯತ್ನಿಸಿದರು.

ಸ್ವಾಮಿ ವಿವೇಕಾನಂದರು "ನನ್ನ ಗುರುದೇವ" ಎಂಬ ಅವರ ಉಪನ್ಯಾಸದಲ್ಲಿ ಹೀಗೆ ಹೇಳಿದ್ದಾರೆ: "ನನ್ನ ಪ್ರಭು ಜಾಡಮಾಲಿಯೊಬ್ಬನ ಬಳಿ ಹೋಗಿ ತಾವು ಅವನ ಮನೆಯನ್ನು ಸ್ವಚ್ಛಗೊಳಿಸಲು ಅನುಮತಿಯನ್ನು ಕೇಳುತ್ತಿದ್ದರು.... ಜಾಡಮಾಲಿಯು ನಿರಾಕರಿಸಿದಾಗ ಗಭೀರ ರಾತ್ರಿಯ ವೇಳೆ ಎಲ್ಲರೂ ಮಲಗಿದ್ದಾಗ ಅವರು ಅವನ ಮನೆಯೊಳಗೆ ಪ್ರವೇಶಿಸಿ, 'ಓ ನನ್ನ ತಾಯಿ, ನನ್ನನ್ನು ಈ ಜಾಡಮಾಲಿಯ ಸೇವಕನನ್ನಾಗಿ ಮಾಡು. ಈ ಜಾಡಮಾಲಿಗಿಂತಲೂ ನಾನು ಕೀಳು ಎಂಬ ಭಾವನೆಯು ನನಗೆ ಬರುವಂತೆ ಮಾಡು,' ಎಂದು ಹೇಳುತ್ತ ತಮ್ಮ ಉದ್ದನೆಯ ಕೂದಲುಗಳಿಂದ ಜಾಗವನ್ನು ಸ್ವಚ್ಛಗೊಳಿಸುತ್ತಿದ್ದರು." ಈ ಜಾಡಮಾಲಿಯೇ ಭಕ್ತ ಚೂಡಾಮಣಿ ರಸಿಕ.

"ಒಂದು ದಿನ ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರು ದಕ್ಷಿಣೇಶ್ವರದ ದಾರಿಯನ್ನು ಗುಡಿಸುತ್ತ, 'ತಾಯಿ ಈ ದಾರಿಯಾಗಿ ಓಡಾಡುತ್ತಾಳೆ' ಎಂದು ಹೇಳುತ್ತ ತನ್ಮಯರಾದರು. ನಾವು ಇಪ್ಪತ್ನಾಲ್ಕು ಗಂಟೆಗಳೂ ಅವರನ್ನು ಗಮನಿಸಿ ಒಂದು ನಿಮಿಷಕ್ಕಾದರೂ ಅವರ ಮನಸ್ಸು ಭಗವಂತನಿಂದ ಬೇರೆಯಾಗುತ್ತಿರಲಿಲ್ಲವೆಂಬುದನ್ನು ನೋಡಿದ್ದೇವೆ. ನಿದ್ರಿಸುತ್ತಿದ್ದಾಗಲೂ ಅವರು ಯಾರಿಗೂ ತಿಳಿಯದಂತೆ 'ಅಮ್ಮಾ, ಅಮ್ಮಾ' ಎನ್ನುತ್ತಿದ್ದರು... ಒಂದು ದಿನ ಕುಳಿತಕಡೆಯೇ ಅವರು 'ಗೌರ್, ಗೌರ್' ಎಂದು ಗುಣುಗುಟ್ಟುತ್ತಿದ್ದುದನ್ನು ಕೇಳಿದ ಒಬ್ಬನು, 'ನೀವೇಕೆ ಗೌರ್, ಗೌರ್ ಎಂದು ಹೇಳುತ್ತಿರುವಿರಿ? ತಾಯಿಯ ಹೆಸರನ್ನು ಜಪಿಸಿ' ಎಂದ ತಕ್ಷಣವೇ ಠಾಕೂರರು ಉತ್ತರಿಸಿದರು:

ಮಗು, ಇನ್ನೇನು ಮಾಡಲಿ, ಹೇಳು. ನೀವುಗಳಾದರೋ ಪತ್ನಿ, ಪುತ್ರ, ಪುತ್ರಿ, ಹಣ-ಕಾಸು ಹೀಗೆ ಅನೇಕ ವಸ್ತುಗಳನ್ನು ಅವಲಂಬಿಸಿರುವಿರಿ. ಆದರೆ ನಾನು ಅವಲಂಬಿಸಿರುವುದು ಒಂದನ್ನು ಮಾತ್ರವೇ. ಆದ್ದರಿಂದಲೇ ಒಮ್ಮೆ ಗೌರಿಯೆಂದೂ, ಒಮ್ಮೆ ಅಮ್ಮಾ, ಒಮ್ಮೆ ರಾಮ, ಕೃಷ್ಣ, ಕಾಳಿ, ಶಿವ ಎನ್ನುತ್ತ ಸಮಯವನ್ನು ಕಳೆಯುತ್ತೇನೆ.' ಈ ಅಹಂಕಾರಶೂನ್ಯ ದೇವಮಾನವನು ಶಪಥ ಮಾಡಿ ಭಕ್ತರೆದುರು ಹೇಳುತ್ತಿದ್ದರು: 'ದೇವರಾಣೆಗೂ ಹೇಳುತ್ತೇನೆ, ಭಗವಂತನಲ್ಲದೆ ನನಗಿನ್ನೇನೂ ಹಿಡಿಸದು.' 'ನನ್ನ ಮಾತುಗಳಲ್ಲಿ ವಿಶ್ವಾಸವಿಡಿರಿ. ಇಲ್ಲಿ ತೋರಿಕೆ, ಆಡಂಬರಗಳಿಲ್ಲ.' ಆಡಂಬರವಿಲ್ಲದ ಕಾರಣದಿಂದಲೇ ಸರಳನಾದ ರಸಿಕನು ಸರಳರಾದ ರಾಮಕೃಷ್ಣರನ್ನು ಗುರುತಿಸಿದನು." ಇದು ಪ್ರತ್ಯಕ್ಷದರ್ಶಿ ಶ್ರೀ "ಮ"ರವರ ವರ್ಣನೆ.

ಠಾಕೂರರ ದೇಹತ್ಯಾಗದಿಂದ ರಸಿಕನು ಅತ್ಯಂತ ದುಃಖಿತನಾದನು. ಕ್ರಮೇಣ ಅವನ ಆರೋಗ್ಯವು ಕೆಟ್ಟಿತು. ಇನ್ನವನು ಕೆಲಸ ಕಾರ್ಯಗಳನ್ನು ಮಾಡಲಾರದಾದನು. ದೇವಸ್ಥಾನದ ಅಂಗಳವನ್ನು ಗುಡಿಸಲು ಹೋಗಲಾಗದಂತಾದಾಗ ಅವನ ಮಗಳು ಅದನ್ನು ಮಾಡುತ್ತಿದ್ದಳು. ರಸಿಕನು ಹಾಸಿಗೆ ಹಿಡಿದನು. ಅವನು ಶರೀರವನ್ನು ತ್ಯಜಿಸುವ ದಿನದಂದು ತನ್ನ ಕುಟುಂಬದವರನ್ನೆಲ್ಲ ಹತ್ತಿರ ಕರೆದು, "ನೀವೆಲ್ಲ ಬೆಳಗ್ಗೆಯೇ ಊಟ ಮಾಡಿಬಿಡಿ. ನಾನು ಕರೆಯುವತನಕ ಯಾರೂ ನನ್ನ ಹತ್ತಿರ ಬರಬೇಡಿರಿ." ಎಂದನು. ಹತ್ತು ಗಂಟೆಯ ಹೊತ್ತಿಗೆ ಅವನ ಮುಖವು ಆನಂದದಿಂದ ಬೆಳಗಿತು, "ತಂದೆ, ನೀನು ಬಂದೆಯಾ? ಕೊನೆಗೂ ನೀನು ನನ್ನನ್ನು ಮರೆಯಲಿಲ್ಲ" ಎಂದನು.

"ನಾನೇನೂ ಆಶೀರ್ವಾದ ಮಾಡಬೇಕಾಗಿಲ್ಲ" ಎಂದು ಹೇಳುತ್ತಿದ್ದ ಶ್ರೀರಾಮಕೃಷ್ಣರ ಆಶೀರ್ವಾದವು ಎಷ್ಟು ಅಮೋಘವಾಗಿತ್ತೆಂಬುದಕ್ಕೆ ಉಜ್ವಲ ದೃಷ್ಟಾಂತವೇ ರಸಿಕ.

ಸ್ವಾಮಿ ಚೇತನಾನಂದರು ಹೇಳುತ್ತಾರೆ : ಕಳೆದ ವರ್ಷ (೧೯೮೧) ಏಪ್ರಿಲ್ ತಿಂಗಳಿನಲ್ಲಿ ಕ್ಯಾನ್ಸಾಸ್ ಸಿಟಿಯ ವೇದಾಂತ ಕೇಂದ್ರದಲ್ಲಿ ಉಪನ್ಯಾಸವನ್ನು ಕೊಡಲು ಹೋಗಿದ್ದೆ. ಓರ್ವ ಮಹಿಳೆಯು ಠಾಕೂರರ ಪುಸ್ತಕಗಳನ್ನೋದಿ ಸೇಂಟ್ ಲೂಯಿಸ್‌ನಲ್ಲಿದ್ದ ನನಗೆ ಪತ್ರವನ್ನು ಬರೆದಿದ್ದಳು. ಅವಳಿಗೆ ಕ್ಯಾನ್ಸಾಸ್‌ನಲ್ಲಿ ನನ್ನನ್ನು ನೋಡಲು ಹೇಳಿದ್ದೆ. ಕೃಷಿಕನೊಬ್ಬನ ಮಗಳಾದ ಈಕೆ ವಿದ್ಯಾವಂತೆ. ಸ್ವಲ್ಪ ದೂರದ ಕ್ಯಾನ್ಸಾಸ್‌ನ ಧಾನ್ಯದ ಉಗ್ರಾಣವೊಂದರಲ್ಲಿ ಕೆಲಸ ಮಾಡುತ್ತಿದ್ದಳು. ಮಹಿಳೆಯು ೩೦೦-೪೦೦ ಮೈಲುಗಳು ಕಾರಿನಲ್ಲಿ ಪ್ರಯಾಣ ಮಾಡಿ ನಾನಿದ್ದಲ್ಲಿಗೆ ಬಂದಳು. ಆಕೆಯೊಂದಿಗೆ ಮಾತನಾಡುತ್ತಿರುವಾಗ ಆಕೆಯ ಕಣ್ಣುಗಳಿಂದ ಕಣ್ಣೀರು ಉದುರತೊಡಗಿದವು. ಧಾನ್ಯದ ಉಗ್ರಾಣದ ಚಿಕ್ಕದೊಂದು ಕುಟೀರದಲ್ಲಿ ಆಕೆಯು ಮಲಗಿದ್ದಾಗ ಶ್ರೀರಾಮಕೃಷ್ಣರು ಆಕೆಗೆ ದರ್ಶನವನ್ನಿತ್ತು ಮಂತ್ರದೀಕ್ಷೆಯನ್ನು ನೀಡಿದ್ದರು. ಆ ಮಂತ್ರವನ್ನು ಆಕೆಯು ನನಗೆ ಹೇಳಿದಾಗ ನಾನು ಮುಗ್ಧನಾಗಿ, ಇದು ಠಾಕೂರರ ವಿಶೇಷ ಕೃಪೆಯೆಂದೇ ಭಾವಿಸಿದೆ. ಸಾವಿರಾರು ಮೈಲುಗಳು ವ್ಯಾಪಿಸಿರುವ ಅಮೆರಿಕದುದ್ದಕ್ಕೂ ಶ್ರೀರಾಮಕೃಷ್ಣರು ಸುತ್ತಾಡುತ್ತ, ಯಾರಲ್ಲಿ ಭಗವದ್ ವ್ಯಾಕುಲತೆಯು ಜಾಗೃತವಾಗಿದೆಯೆಂದು ನೋಡುತ್ತಿರುವರೆಂದು ತೋರುತ್ತದೆ!

ಪ್ರಭುದಯಾಳ್ ಮಿಶ್ರ ಎಂಬ ಕ್ರೈಸ್ತಧರ್ಮಿಯು ಒಂದು ದಿನ ಶ್ರೀರಾಮಕೃಷ್ಣರನ್ನು ನೋಡಲು ಬಂದನು. ಅವನು ಕಾವಿಬಟ್ಟೆ ತೊಟ್ಟಿದ್ದರಿಂದ ಕ್ರೈಸ್ತನೆಂದು ನಮಗೆ ಮೊದಲು ತಿಳಿಯಲಿಲ್ಲ. ಅನಂತರ ಮಾತಿನ ಸಂದರ್ಭದಲ್ಲಿ ತನ್ನ ನೈಜ ಸ್ವರೂಪವನ್ನು ತಿಳಿಸಿದನು. ಆಗ ಕ್ರೈಸ್ತನಾಗಿಯೂ ಕಾವಿಬಟ್ಟೆಯನ್ನು ಉಟ್ಟಿರುವುದು ಏಕೆಂದು ರಾಮಕೃಷ್ಣರ ಭಕ್ತರು ಪ್ರಶ್ನಿಸಿದರು. ಆಗ ಅವನು ಹೇಳಿದ : "ನಾನು ಬ್ರಾಹ್ಮಣ ವಂಶದಲ್ಲಿ ಜನಿಸಿದವನು. ಭಾಗ್ಯವಶದಿಂದ ಕ್ರಿಸ್ತನ ಮೇಲೆ ವಿಶ್ವಾಸ ಉಂಟಾಗಿ ಅವನನ್ನೇ ಇಷ್ಟದೇವತೆಯಾಗಿ ಸ್ವೀಕರಿಸಿರುವೆನು. ಇಷ್ಟಕ್ಕಾಗಿ ನಾನು ವಂಶಪಾರಂಪರ್ಯದಿಂದ ಬಂದ ಸಂಪ್ರದಾಯನ್ನು ಬಿಡಬೇಕೇನು ? ನನಗೆ ಯೋಗಶಾಸ್ತ್ರದಲ್ಲಿ ವಿಶ್ವಾಸವಿದೆ. ನಾನು ಕ್ರಿಸ್ತನನ್ನು ಇಷ್ಟದೇವತೆಯಾಗಿ ಅವಲಂಬಿಸಿ ನಿತ್ಯ ಯೋಗಾಭ್ಯಾಸ ಮಾಡುತ್ತೇನೆ. ಜಾತಿ ಭೇದದಲ್ಲಿ ನನಗೆ ವಿಶ್ವಾಸವಿಲ್ಲ. ಆದರೂ ಯಾರ ಯಾರ ಕೈಯಿಂದಲೊ ಆಹಾರ ಸ್ವೀಕರಿಸಿದರೆ ಯೋಗಾಭ್ಯಾಸಕ್ಕೆ ಹಾನಿ ಉಂಟಾಗುತ್ತದೆ ಎಂದು ನಾನೇ ಅಡುಗೆ ಮಾಡಿ ಹವಿಷ್ಯಾನ್ನ ಉಣ್ಣುತ್ತೇನೆ. ಇದರ ಪರಿಣಾಮವಾಗಿ ನಾನು ಕ್ರೈಸ್ತನಾದರೂ ಜ್ಯೋತಿ ದರ್ಶನವೇ ಮುಂತಾದ ಯೋಗಸಿದ್ಧಿಗಳು ನನಗುಂಟಾಗಿವೆ. ಭಾರತದ ಭಗವದ್ಭಕ್ತರಾದ ಯೋಗಿಗಳು ಸನಾತನ ಕಾಲದಿಂದಲೂ ಕಾವಿವಸ್ತ್ರವನ್ನು ಧರಿಸುತ್ತಿದ್ದರು. ಇದಲ್ಲದೆ ಬೇರೆ ಪ್ರಕಾರದ ಉಡುಗೆ ನನಗೆ ಪ್ರಿಯವಾಗಲು ಸಾಧ್ಯವೇ?" ನರೇಂದ್ರನು (ವಿವೇಕಾನಂದ) ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಹಾಕಿ ಅವನ ಆಂತರಿಕ ಭಾವಗಳೆಲ್ಲ ಹೊರಬರುವಂತೆ ಮಾಡಿದ. ಅವನು ನಿಜವಾದ ಸಾಧು ಮತ್ತು ಯೋಗಿ ಎಂಬುದನ್ನು ತಿಳಿದು ನರೇಂದ್ರನು ಅವನನ್ನು ತುಂಬಾ ಸನ್ಮಾನಿಸಿ ಭಕ್ತರಿಗೂ ಹಾಗೆ ಮಾಡಲು ಹೇಳಿದ. ಭಕ್ತರೆಲ್ಲರೂ ಅವನ ಪಾದವನ್ನು ಸ್ಪರ್ಶಿಸಿ ಪ್ರಣಾಮವನ್ನು ಮಾಡಿದರು ಮತ್ತು ಅವನೊಡನೆ ಕುಳಿತು ಶ್ರೀರಾಮಕೃಷ್ಣರ ಪ್ರಸಾದವಾದ ಆಹಾರ ಸ್ವೀಕರಿಸಿದರು. ಶ್ರೀರಾಮಕೃಷ್ಣರು ಸಾಕ್ಷಾತ್ ಕ್ರಿಸ್ತನೆಂದೇ ಅವನ ದೃಢನಂಬಿಕೆಯಾಗಿತ್ತು.